ದಿನಾಂಕಃ **22-04-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ-5 ರವರ ಪರ ವಕೀಲರಾದ ಶ್ರೀ ಕೆ.ಕೆ.ಜಿ.ರವರಿಂದ ಃ**

**1.** ನಾನು ಪದವಿದರನಾಗಿ ಟೀಚರ್ ತರಬೇತಿ ಸಹ ಪಡೆದಿದ್ದೇನೆ. ನಾನು ವೃತ್ತಿಯಲ್ಲಿ ಶಿಕ್ಷಕ. ಅದನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ. 3 ನೇ ವಾದಿ ತಾಂತ್ರಿಕ ತರಬೇತಿ ಪಡೆದು ಸರ್ಕಾರಿ ನೌಕರನಾಗಿದ್ದಾನೆ. 1985 ರಲ್ಲಿ ನನ್ನ ತಂದೆ ತೀರಿಕೊಂಡರು. ಸುಮಾರು 25 ವರ್ಷಗಳಿಂದ ನಾವು ವಾದಿಗಳು ಕೆ.ಆರ್. ಪೇಟೆಯಲ್ಲಿ ವಾಸವಾಗಿದ್ದೇವೆ. ನಮ್ಮ ಒಟ್ಟು ಕುಟುಂಭದ ಸ್ವತ್ತುಗಳು ಸರ್ವೇ ನಂಃ71/1 ರಲ್ಲಿ 51 ಗುಂಟೆ, 72/2 ರಲ್ಲಿ 20 ಗುಂಟೆ ಮತ್ತು 1 ಮನೆ ಸ್ವತ್ತು ಪಾಂಡವಪುರದಲ್ಲಿ ಇತ್ತು. ಸದರಿ ಸ್ವತ್ತುಗಳು ನನ್ನ ತಂದೆಯ ತಾಯಿ ಪುಟ್ಟಮ್ಮ ರವರಿಗೆ ಅವರ ಗಂಡ ಹನುಮೇಗೌಡರಿಂದ ಪವತಿ ವಾರಸು ಬಂದಿತ್ತು. ಸದರಿ ದಾಖಲೆಗಳನ್ನು ನೋಡಿದ್ದೇನೆ ಮತ್ತು ಹಾಜರುಪಡಿಸಿದ್ದೇನೆ.

**2.** 1 ನೇ ಪ್ರತಿವಾದಿ ರಾಮೇಗೌಡ ಬಿನ್ ಹನುಮೇಗೌಡ ನನ್ನ ದೊಡ್ಡಪ್ಪ. ಸರ್ವೇ ನಂಃ181/1 ಪೈ-ಪಿ-3 ಯಲ್ಲಿ 10 ಗುಂಟೆ ಸ್ವತ್ತು 1 ನೇ ಪ್ರತಿವಾದಿಗೆ ಸೇರಿತ್ತು ಎಂದರೆ ಸರಿ . ಸದರಿ ಸ್ವತ್ತು ಪಿತ್ರಾರ್ಜಿತ ಸ್ವತ್ತು. ಎಂ.ಆರ್. ನಂಬರ್-40/80-81 ರಂತೆ ವಿಭಾಗದಡಿ 1 ನೇ ಪ್ರತಿವಾದಿಗೆ ಸದರಿ ಸ್ವತ್ತು ಬಂದಿತ್ತು ಎಂದರೆ ಸರಿ. ನಮ್ಮ ಕುಟುಂಭದ ಸ್ವತ್ತುಗಳಲ್ಲಿ ಈಗಾಗಲೆ ವಿಭಾಗವಾಗಿದ್ದು ಎಂ.ಆರ್. ನಂಬರ್-40/80-81 ರಂತೆ ಸ್ವತ್ತುಗಳು ವಿಭಾಗವಾಗಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ 465/1999 ರಲ್ಲಿ ಸರ್ವೇ ನಂಃ181/1 ಪೈ-ಪಿ-3 ಯಲ್ಲಿ 10 ಗುಂಟೆ ಸ್ವತ್ತನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ಚಿಕ್ಕಪ್ಪ. ಸರ್ವೇ ನಂಃ 72/2 ರಲ್ಲಿ 20 ಗುಂಟೆ 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ 465/1999 ನ್ನು ನನ್ನ ತಾಯಿ ನಡೆಸುತ್ತಿದ್ದರು. ಸದರಿ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳಲ್ಲಿ 2 ನೇ ಪ್ರತಿವಾದಿಯ ಹೆಸರೇ ಬರುತ್ತಿದೆ ಎಂದರೆ ಸರಿಯಲ್ಲ.

**3.** 2 ನೇ ಪ್ರತಿವಾದಿಯ ವ್ಯವಹಾರದ ಬಗ್ಗೆ ನಾನು ಏನೂ ತಿಳಿದುಕೊಂಡಿಲ್ಲ. 2 ನೇ ಪ್ರತಿವಾದಿ ನಾಗರಾಜ್‌ರವರಿಂದ ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಗರಾಜು ಅಸಲು ದಾವಾ ಸಂಖ್ಯೆಃ 664/1999 ರಂತೆ ಹಣ ವಸೂಲಾತಿಗಾಗಿ 2 ನೇ ಪ್ರತಿವಾದಿಯ ವಿರುದ್ಧ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ಡಿಕ್ರಿಯಾಗಿ ನಾಗರಾಜುರವರು ಎಗ್ಸಿಕ್ಯೂಷನ್ ಃ76/2000 ಅಮಲ್ ಜಾರಿ ಪ್ರಕರಣ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 2 ನೇ ಪ್ರತಿವಾದಿ ನಾಗರಾಜ್‌ರವರಿಂದ ಸಾಲ ಪಡೆದು ನ್ಯಾಯಾಲಯದಿಂದ ಜಪ್ತಿ ಆದೇಶವಾಗಿ ಹಾರಾಜು ಪ್ರಕ್ರಿಯೆ ಸಹ ನಡೆದಿರುವ ಬಗ್ಗೆ ನಾನೆ ಹೇಳಿದ್ದೇನೆ. ಸರ್ವೇ ನಂಃ72/2 ರ 20 ಗುಂಟೆ ಸ್ವತ್ತನ್ನು ನ್ಯಾಯಲಯದಿಂದ ಜಪ್ತಿಯಾಗಿ ಹಾರಾಜು ಪ್ರಕ್ರಿಯೆಯಲ್ಲಿ 5 ನೇ ಪ್ರತಿವಾದಿಯ ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಜಪ್ತಿಯಾದ ಹಾರಾಜು ಪ್ರಕಿರಯೆಯನ್ನು ನಾವು ವಾದಿಗಳು ಎಲ್ಲೂ ಪ್ರಶ್ನಿಸಿಲ್ಲ ಎಂದರೆ ಸರಿ. ನ್ಯಾಯಾಲಯದಿಂದ 5 ನೇ ಪ್ರತಿವಾದಿಯು ಸರ್ವೇ ನಂಃ72/2 ರ ಸ್ವತ್ತನ್ನು ಖರೀದಿಸಿದ ನಂತರ ಆಕೇಯ ಹೆಸರಿಗೆ ನ್ಯಾಯಾಲಯದಿಂದ ದೃಡೀಕೃತ ಪ್ರಮಾಣ ಪತ್ರ ನೀಡಿದ್ದು ಅದರ ಆದಾರದ ಮೇಲೆ ಆಕೆಯ ಹೆಸರಿಗೆ ಖಾತೆ ಸಹ ಬಂದಿದೆ ಎಂದರೆ ಸರಿ.

**4.** ದಿಃ25.08.2008 ರಲ್ಲಿ 5 ನೇ ಪ್ರತಿವಾದಿಗೆ ಮಾರಾಟವು ನ್ಯಾಯಾಲಯದಿಂದ ಪುರಸ್ಕರಿಸಲ್ಪಟ್ಟಿತ್ತು (Conformation of Sale) ಎಂದರೆ ಸರಿ. ಅದಕ್ಕು ಮೊದಲು ಎಫ್.ಡಿ.ಪಿ.ಃ1/2001 ರ ಅಂತಿಮ ಡಿಕ್ರಿಯು ಆಗಿತ್ತು ಎಂದರೆ ಸರಿ.

**5.** Ex.76/2000 ರಲ್ಲಿ ದಿಃ19.11.2003 ರಂದು ಸ್ವತ್ತಿನ ಜಪ್ತಿ ಅದೇಶ ಆಗಿತ್ತು ಎಂದರೆ ಸರಿ . ಅದರಂತೆ ದಿಃ24.12.2003 ರಂದು ಸ್ವತ್ತಿನ ಜಪ್ತಿ ಯಾಗಿತ್ತು ಎಂದರೆ ಸರಿ. ನಂತರ ನ್ಯಾಯಾಲಯದಿಂದ ಹಾರಾಜಿಗಾಗಿ ಪ್ರಕಿರಯೇ ನಡೆಸಲಾಗಿತ್ತು ಎಂದರೆ ಸರಿ. ದಿಃ 20.12.2005 ರಂದು ನ್ಯಾಯಾಲಯದಲ್ಲಿ 5 ನೇ ಪ್ರತಿವಾದಿಯು ರೂ.21,600/- ಗಳಿಗೆ ಹೆಚ್ಚಿನ ಬೆಲೆಗೆ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ20.12.2005 ರಂದು ಅದರಲ್ಲಿ ¼ ಭಾಗ ರೂ.5,400/-ಗಳನ್ನು ನ್ಯಾಯಾಲಯದಲ್ಲಿ 5 ನೇ ಪ್ರತಿವಾದಿಯ ಜಮೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ03.01.2006 ರಂದು 5 ನೇ ಪ್ರತಿವಾದಿಯು ನ್ಯಾಯಾಲಯದಲ್ಲಿ ಉಳಿಕೆ ¾ ರ ಭಾಗ ರೂ.16,100/-ಗಳನ್ನು ನ್ಯಾಯಾಲಯಕ್ಕೆ ಜಮೆ

ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಫ್.ಡಿ.ಪಿ.1/2001 ನ್ಯಾಯಾಲಯದಲ್ಲಿ ಅಂತಿಮ ಡಿಕ್ರಿಯಾಗುವ ಮೊದಲೆ Ex.76/2000 ರಲ್ಲಿ 5 ನೇ ಪ್ರತಿವಾದಿಯ ಹೆಸರಿಗೆ ಸರ್ವೇ ನಂಃ 72/2 ರ 20 ಗುಂಟೆ ಸ್ವತ್ತು ಹರಾಜು ಪ್ರಕ್ರಿಯೆಯಲ್ಲಿ ನ್ಯಾಯಾಲಯದಿಂದ ಆದೇಶವಾಗಿತ್ತು ಎಂದರೆ ಸರಿಯಲ್ಲ. ನಿಪಿ-1 ಎಫ್.ಡಿ.ಪಿ.1/2001 ರ ಅಂತಿಮ ಡಿಕ್ರಿಯಲ್ಲಿ ದಾವಾ ಸ್ವತ್ತು ಸರ್ವೇ ನಂಃ72/2, 5 ¾ ಗುಂಟೆ ನಮೂದಾಗಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**

**ಸಾಕ್ಷಿದಾರರ ಸಹಿ.**